**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಪೊನ್ನಂಪೇಟೆ, ಕೊಡಗು ಜಿಲ್ಲೆ.**

ಪಿ ಸಿಃ **621/2021**

**ಪ್ರಾ. ಸಾ. ಃ-1**

ಹೆಸರು ಃ- ಶ್ರೀಮತಿ ನಿಶಾ @ ಸುಷ್ಮ
ಗಂಡನ ಹೆಸರು ಃ- ಪ್ರಶಾಂತ್
ವಯಸ್ಸು ಃ- 29 ವರ್ಷ
ಉದ್ಯೋಗ ಃ- ಗೃಹಿಣಿ
ವಾಸಸ್ಥಳ ಃ- ಮುಗುಟಗೇರಿ

---

**ಪ್ರಮಾಣೀಕರಿಸಲಾದ ದಿನಾಂಕ :-16-04-2022.**

**ವಿಚಾರಣೆ ಃ ನ್ಯಾಯಾಲಯದಿಂದ ಃ-**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 200ರಡಿಯಲ್ಲಿ ನ್ಯಾಯಾಲಯದಿಂದ ಸಾಕ್ಷಿಯ ವಿಚಾರಣೆಃ-**

1 ನೇ ಆರೋಪಿ ನನ್ನ ಗಂಡ. ನಮ್ಮ ಮದುವೆ ದಿ. 26.05.2019 ರಲ್ಲಿ ನಾಪೋಕ್ಲುವಿನ ಭಗವತಿ ಕಲ್ಯಾಣ ಮಂಟಪದಲ್ಲಿ ಸಂಪ್ರದಾಯದ ಪ್ರಕಾರ ನೆರವಿರುತ್ತದೆ. ಮದುವೆ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದೆ. ನನ್ನ ಗಂಡನ ಮನೆಯಲ್ಲಿ ನನ್ನ ಗಂಡನ ಅಣ್ಣ, ಅತ್ತೆ, ಗಂಡನ ಅಣ್ಣನ ಹೆಂಡತಿ ವಾಸ ಮಾಡುತ್ತಿದ್ದೆವು. ನಮ್ಮ ಮದುವೆಗೆ ನನ್ನ ಪೋಷಕರು ಸುಮಾರು 5 ಲಕ್ಷದಷ್ಟು ಖರ್ಚು ಮಾಡಿದ್ದಾರೆ. ಮದುವೆ ಆದ 1 ವಾರದವರೆಗೆ ಮಾತ್ರ ನಾನು ನನ್ನ ಗಂಡ ಹೆಂಡತಿ ಚೆನ್ನಾಗಿದ್ದೆವು, ನಂತರದಲ್ಲಿ ನನ್ನ ಗಂಡ ಕುಡಿದು ಬಂದು ಗನ್ನು ತೆಗೆದುಕೊಂಡು ನನ್ನನ್ನು ಕೊಲ್ಲುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದ, ನನ್ನ ಅತ್ತೆ ವಿನಾಕಾರಣ ಬೈಯುತ್ತಿದ್ದರು, ಕಿರುಕುಳ ಕೊಡುತ್ತಿದ್ದರು. ಆರೋಪಿ ನಂ. 5 ರವರು ನನ್ನ ಗಂಡನ ಬಳಿ ಚಾಡಿಮಾತನ್ನು ಹೇಳಿ ನನಗೆ ಹಲ್ಲೆ ಮಾಡಿಸುತ್ತಿದ್ದರು. ನಾನು ಕಿರುಕುಳ ತಾಳಲಾರದೆ ನನ್ನ ತಾಯಿ ಮನೆಗೆ ಬಂದು ಒಂದು ವಾರ ಇದ್ದು ನಂತರದಲ್ಲಿ ನಾಪೋಕ್ಲು ಮತ್ತು ಪೊನ್ನಂಪೇಟೆ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿದ್ದೆ. ಠಾಣೆಗೆ ಹೋದಾಗ ಅಲ್ಲಿ ರಾಜೀ ತೀರ್ಮಾನ ಮಾಡಿ ನನನ್ನು ನನ್ನ ತಾಯಿ ಜೊತೆಯಲ್ಲಿ ನನ್ನ ಗಂಡನ ಮನೆಗೆ ಕಳುಹಿಸಿಕೊಟ್ಟಿದ್ದರು. ನನ್ನ ತಾಯಿ ನನ್ನನ್ನು ಗಂಡನ ಮನೆಯಲ್ಲಿ ಬಿಟ್ಟು ವಾಪಸ್ ಬಸ್ ನಿಲ್ದಾಣಕ್ಕೆ ಬರುವಷ್ಟಲ್ಲಿ ನನ್ನ ಅತ್ತೆ ನನ್ನೊಂದಿಗೆ ಜಗಳ ತೆಗೆದು ಹಣ ಕೊಡುವಂತೆ ಕೇಳಿದ್ದರು. ಆಗ ನಾನು ನನ್ನ ಬಳಿ ಇದ್ದ 2000 ರೂ ಹಣವನ್ನು ಕೊಟ್ಟಿದ್ದೆ, ಆದರೂ ಸಹ ಅವರು ಸುಮಾರು 2

ಲಕ್ಷದಷ್ಟು ವರದಕ್ಷಿಣೆ ಬೇಕು ಅಂತ ಹಣ ಕೇಳಿದ್ದರು. ಆಗ ನಾನು ನನ್ನ ತಾಯಿಗೆ ಫೋನ್ ಮಾಡಿದಾಗ ನನ್ನ ತಾಯಿ ಬಸ್ ನಿಲ್ದಾಣದಿಂದ ವಾಪಸ್ ಬಂದು ನನ್ನನ್ನು ಸಹ ಅವರೊಂದಿಗೆ ತವರು ಮನೆಗೆ ಕರೆದುಕೊಂಡು ಹೋದರು.

ನಮ್ಮ ದಾಂಪತ್ಯ ಜೀವನದಿಂದ ನನಗೆ ದಿ. **22.03.2020** ರಂದು ಒಂದು ಗಂಡು ಮಗು ಜನಿಸಿದ್ದು, ಮಗುವಿನ ಹೆಸರು ಸುಬ್ಬಯ್ಯ ಅಂತ ಇಟ್ಟಿದ್ದೇವೆ. ನನ್ನ ತವರು ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಮಾತ್ರ ಇರುತ್ತೇವೆ. ಮಗು ಜನಿಸಿದ ನಂತರ ನನ್ನ ಗಂಡ ರಾತ್ರಿ ಸಮಯದಲ್ಲಿ ಕುಡಿದು ಬಂದು ನಮ್ಮ ಮನೆಯ ಬಾಗಿಲುಗಳನ್ನು ಒಡೆದು ಹಾಕಿ ಒಂದೂವರೆ ತಿಂಗಳ ಮಗುವನ್ನು ಎತ್ತಿಕೊಂಡು ಹೋಗಿದ್ದರು. ಆ ವಿಚಾರದಲ್ಲಿ ಪೊನ್ನಂಪೇಟೆ ಪೊಲೀಸ್ ಠಾಣೆಗೆ ಹಾಗು ಮಡಿಕೇರಿಯ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ದೂರು ಕೊಟ್ಟಿದ್ದೆ. ದೂರು ಕೊಟ್ಟ ನಂತರ ನಾವು ನಾವೇ ಹೋಗಿ ಗಂಡನ ಮನೆಯಿಂದ ಮಗುವನ್ನು ತೆಗೆದುಕೊಂಡು ಬಂದೆವು. ನನ್ನ ಗಂಡ ನನ್ನ ಮಗುವನ್ನು ಹಲವಾರು ಬಾರಿ ತೆಗೆದುಕೊಂಡು ಹೋಗಿರುತ್ತಾರೆ, ಹಲವಾರು ಬಾರಿ ನಾವು ಮಗುವನ್ನು ವಾಪಸ್ ತೆಗೆದುಕೊಂಡು ಬಂದಿರುತ್ತೇವೆ. ನನ್ನ ಗಂಡ ಮತ್ತು ಆತನ ಮನೆಯವರು ನನಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದು, ಅವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಈ ಹಂತದಲ್ಲಿ ಮುಂದಿನ ವಿಚಾರಣೆಗೆ ಸಮಯ ಕೇಳಲಾಗಿ ನೀಡಲಾಯಿತು.

**ಓ. ಹೇ. ಕೇ. ಸ. ಇ. ಎ. ಒ.**

**ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಪೊನ್ನಂಪೇಟೆ.**

ಸಾಕ್ಷಿದಾರರ ಸಹಿ